ಇವರು ತಿಳಿಸಿರುತ್ತಾರೆ. 2011ರ ಜನಗಣತಿ ಅಂಕಿ-ಅಂಶಗಳನ್ನು ಅಧಿಕೃತವಾಗಿ ಪ್ರಕಟಿಸಿದ ನಂತರ ಶಿವಮೊಗ್ಗ ನಗರಸಭೆ ವ್ಯಾಪ್ತಿಯನ್ನು ಮಹಾನಗರ ಪಾಲಿಕೆಯೆಂದು ರಚಿಸುವ ಬಗ್ಗೆ ಪರಿಶೀಲಿಸಿ ತೀರ್ಮಾನ ತೆಗೆದುಕೊಳ್ಳಲಾಗುವುದು.

ಇ) ಇಲ್ಲ.

ಈ) ಇಲ್ಲ.

ಗಣಿ ಲಾರಿ ಮಾಲೀಕರಿಂದ ಅಭಿವೃದ್ಧಿ ಹಣ ವಸೂಲಿ

405 : (598)

ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಗಣಿ ಲಾರಿ ಮಾಲೀಕರಿಂದ ಪ್ರತಿ ಲಾರಿಗಳಿಂದ ಸ್ಥಳೀಯ ಆಡಳಿತ ಅಭಿವೃದ್ಧಿ ಹಣ ವಸೂಲಿ ಮಾಡುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಎಷ್ಟು ಹಣ ವಸೂಲಿ ಮಾಡಲಾಗಿದೆ;

ಆ) ಇದಕ್ಕೆ ಸರ್ಕಾರದ ಆದೇಶ ಹೊರಡಿಸಲಾಗಿದೆಯೇ; ಈ ಹಣ ವಸೂಲಿ ಮಾಡಲು ಯಾರು ಪರವಾನಿಗೆ ನೀಡಿರುತ್ತಾರೆ? (ಮಾಹಿತಿ ನೀಡುವುದು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಮುಖ್ಯಮಂತ್ರಿಯವರು)

ಅ) ಗಣಿ ಲಾರಿ ಮಾಲೀಕರಿಂದ ವಂತಿಕೆಯನ್ನು/ಹಣವನ್ನು ಜಿಲ್ಲಾಡಳಿತವು ವಸೂಲಿ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಅಲ್ಲದೆ ಗಣಿ ಗುತ್ತಿಗೆದಾರರುಗಳಿಂದ ವಂತಿಕೆಯನ್ನು /ಹಣವನ್ನು ಜಿಲ್ಲಾಡಳಿತವು ವಸೂಲಿ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಗಣಿ ಗುತ್ತಿಗೆದಾರರುಗಳಿಂದ ದಿನಾಂಕ: 18-01-2006 ರಿಂದ 03-08-2010ರ ವರೆಗೆ ಕಂದಾಯ ಇಲಾಖೆಯಿಂದ ಸಂಗ್ರಹಣೆ ಮಾಡಿದ ಮೊತ್ತ ರೂ.11,61,78,540/-

ಆ) ಗಣಿಗುತ್ತಿಗೆದಾರರುಗಳಿಂದ ವಂತಿಕೆಯನ್ನು ವಸೂಲಿ ಮಾಡಲು ಸರ್ಕಾರದಿಂದ ಆದೇಶವನ್ನು ಹೊರಡಿಸಿರುವುದಿಲ್ಲ. ಗಣಿ ಗುತ್ತಿಗೆದಾರರುಗಳು ಸ್ವಇಚ್ಛೆಯಿಂದ ಪರಿಸರ ಅಭಿವೃದ್ಧಿ ಹಾಗೂ ಗಣಿಗಾರಿಕೆಯಿಂದ ಬಾಧಿತ ಗ್ರಾಮಗಳ ಅಭಿವೃದ್ಧಿಗಾಗಿ ನೀಡಿರುವ ವಂತಿಕೆ ಹಣವಾಗಿರುತ್ತದೆ. ಈ ರೀತಿ ವಂತಿಕೆಯನ್ನು ವಸೂಲಿ ಮಾಡುತ್ತಿರುವ ಕ್ರಮವನ್ನು ತಕ್ಷಣವೇ ನಿಲ್ಲಿಸುವಂತೆ ಹಾಗೂ ಸಂಗ್ರಹಿಸಿರುವ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ತುಂಬುವಂತೆ ಸರ್ಕಾರದಿಂದ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ಒತ್ತುವರಿ ಮಾಡಿ ನಿವೇಶನಗಳನ್ನು ವಿಂಗಡಿಸಿರುವುದು

373 : (618)

ಡಾ: ಸುಧಾಕರ್ ಎಂ.ಸಿ. (ಚಿಂತಾಮಣಿ)

ಅ) ಚಿಂತಾಮಣಿ ನಗರದ ಸ.ನಂ.34 ರಲ್ಲಿ ಪಕ್ಕದ ಬಡಾವಣೆಯವರು ಒತ್ತುವರಿ ಮಾಡಿ ಹೆಚ್ಚುವರಿ ನಿವೇಶನಗಳನ್ನು ವಿಂಗಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ತಾಲ್ಲೂಕು ಮೋಜಿಣಿದಾರರು ಸ.ನಂ.34ರಲ್ಲಿ ಅಳತೆ ಮಾಡಿ ಸರ್ಕಾರಿ ಜಾಗ ಒತ್ತುವರಿಯಾಗಿರುವುದನ್ನು ವರದಿ ಸಲ್ಲಿಸಿದ್ದರೂ ಇದುವರೆವಿಗೂ ತೆರವುಗೊಳಿಸದೇ ಇರುವುದಕ್ಕೆ ಕಾರಣಗಳೇನು;

ಇ) ಈ ಸರ್ಕಾರಿ ಸ್ವತ್ತನ್ನು ಉಳಿಸಿಕೊಳ್ಳುವ ಬಗ್ಗೆ ನಿರ್ಲಕ್ಷ್ಯ ತೋರಿಸಿರುವ ಅಧಿಕಾರಿಗಳ ವಿರುದ್ಧ ಯಾವ ರೀತಿ ಕ್ರಮ ತೆಗೆದುಕೊಳ್ಳಲಾಗುವುದು;

ಈ) ಇನ್ನೆಷ್ಟು ದಿನಗಳೊಳಗಾಗಿ ಈ ಅನಧಿಕೃತ ಒತ್ತುವರಿದಾರರನ್ನು ತೆರವುಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಕೆ.ಎಸ್.ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು)

ಅ) ಹೌದು.

ಆ) ಚಿಂತಾಮಣಿ ತಾಲ್ಲೂಕು, ಚಿಂತಾಮಣಿ ಗ್ರಾಮದ ಸ.ನಂ.34 ಸರ್ಕಾರಿ ಜಮೀನಾಗಿದ್ದು, ಆಕಾರ್‌ಬಂದ್‌ನಂತೆ ಕೆರೆ ನೀರು ಮುಳುಗಡೆ ಕಾರಂಜಿ ಎಂದು ವರ್ಗೀಕರಣಗೊಂಡಿರುತ್ತದೆ. ಸದರಿ ಜಮೀನು ಒಟ್ಟು 9.21